# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 503

ಉತ್ತರ ದಿನಾಂಕ : 08.12.2023

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಒಂದು ವರ್ಷದಿಂದ ಜಿಲ್ಲೆಯಲ್ಲಿ ಕಲುಷಿತ ನೀರು ಸೇವಿಸಿ ಮೃತಪಟ್ಟಿರುವ ಮತ್ತು ಅಸ್ವಸ್ಥಗೊಂಡಿರುವ ವಿವರವನ್ನು ಜಿಲ್ಲಾವಾರು ನೀಡುವುದು: ಸಾವಿಗೀಡಾದವರಿಗೆ ಸರ್ಕಾರ ಪರಿಹಾರ ನೀಡಿದೆಯೇ; ನೀಡಿರುವ ಪರಿಹಾರಗಳೇನು: | ಕಲುಷಿತ ನೀರು ಸೇವಿಸಿ ಒಟ್ಟು 07 ಜನ ಮೃತಪಟ್ಟಿರುವ ಪ್ರಕರಣಗಳು ಮತ್ತು 417 ಜನ ಅಸ್ವಸ್ಥಗೊಂಡಿರುವ ಪ್ರಕರಣಗಳು ವರದಿಯಾಗಿರುತ್ತವೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.<br>ಸಾವಿಗೀಡಾದವರಿಗೆ ಸರ್ಕಾರದಿಂದ ಪರಿಹಾರ ನೀಡಲಾಗಿರುತ್ತದೆ. ಕೊಪ್ಪಳ ಜಿಲ್ಲೆಯ ಮೃತ ಕುಟುಂಬಕ್ಕೆ ತಲಾ ರೂ.2,00,000 ಪರಿಹಾರ ನೀಡಲಾಗಿರುತ್ತದೆ.<br>ಯಾದಗಿರಿ ಜಿಲ್ಲೆಯಲ್ಲಿ ಮರಣ ಹೊಂದಿದ 03 ಜನರ ಕುಟುಂಬಸ್ಥರಿಗೆ ತಲಾ ರೂ.5,00,000 ಪರಿಹಾರವನ್ನು ನೀಡಲಾಗಿರುತ್ತದೆ. |
| ಆ) | ಕಲುಷಿತ ನೀರು ಸೇವನೆ ಪ್ರಕರಣಗಳ ಸಂಪೂರ್ಣ ವಿವರ ನೀಡುವುದು; ನೀರು ಕಲುಷಿತಗೊಳ್ಳಲು ಕಾರಣಗಳೇನು; | ಕಲುಷಿತ ನೀರು ಸೇವನೆ ಪ್ರಕರಣಗಳ ವಿವರ ಮತ್ತು ನೀರು ಕಲುಷಿತಗೊಳ್ಳಲು ಕಾರಣಗಳನ್ನು ಅನುಬಂಧ-2ರಲ್ಲಿ ನೀಡಿದೆ. |
| ಇ) | ಕಲುಷಿತ ನೀರು ಸೇವನೆ ಪ್ರಕಣರಕ್ಕೆ ಸಂಬಂಧಪಟ್ಟಂತೆ ಎಷ್ಟು ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು) | ಬೀದರ್, ಕೊಪ್ಪಳ ಮತ್ತು ಯಾದಗಿರಿ ಜಿಲ್ಲಾ ವ್ಯಾಪ್ತಿಯಲ್ಲಿ ನಡೆದ ಪ್ರಕರಣಗಳಿಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿರುತ್ತದೆ. |
| ಈ) | ರಾಜ್ಯದಲ್ಲಿ ನೈರ್ಮಲ್ಯ ಅಭಿಯಾನ ನಡೆಸಿ, ಉತ್ತಮ ಗುಣಮಟ್ಟದ ಕುಡಿಯುವ ನೀರು ಪೂರೈಸುವ ನಿಟ್ಟಿನಲ್ಲಿ ವಿಭಾಗದಿಂದ ಕೈಗೊಂಡಿರುವ ಕ್ರಮಗಳೇನು ? | ರಾಜ್ಯದಲ್ಲಿ ಗ್ರಾಮೀಣ ಜನವಸತಿ ಪ್ರದೇಶಗಳಿಗೆ ಉತ್ತಮ ಗುಣಮಟ್ಟದ ಕುಡಿಯುವ ನೀರನ್ನು ಪೂರೈಸುವ ನಿಟ್ಟಿನಲ್ಲಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈ ಗೊಂಡಿದೆ.<br>1. ಮೇಲ್ಮೈ ನೀರು ಆಧಾರಿತ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>2. 18,000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br>3. ಗ್ರಾಮೀಣ ಮಟ್ಟದಲ್ಲಿ ನೀರಿನ ಗುಣಮಟ್ಟದ ಬಗ್ಗೆ ಅರಿವು ಮೂಡಿಸುವಲ್ಲಿ ಸ್ಥಳದಲ್ಲಿಯೇ Field Test Kitಗಳ ಮೂಲಕ ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳುವ ಬಗ್ಗೆ ತರಬೇತಿಯನ್ನು ನೀಡಲಾಗಿದ್ದು, ಗ್ರಾಮ ಪಂಚಾಯತಿಗಳಿಗೆ Field Test Kit & $H_2S$ Vials ಗಳನ್ನು ಸರಬರಾಜು ಮಾಡಲಾಗುತ್ತಿದೆ. |

| | | |
|---|---|---|
| | | 4. ರಾಜ್ಯಾದ್ಯಂತ 31 ಜಿಲ್ಲಾ ಪ್ರಯೋಗಾಲಯ ಮತ್ತು 48 ತಾಲ್ಲೂಕು ಪ್ರಯೋಗಾಲಯಗಳನ್ನು ಸ್ಥಾಪಿಸುವ ಮೂಲಕ ಎಲ್ಲಾ ಗ್ರಾಮೀಣ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕುಡಿಯುವ ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ.<br>5. ಸಾರ್ವಜನಿಕರು, ಆಶಾ ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮದ ನೀರು ಮತ್ತು ನೈರ್ಮಲ್ಯ ಸಮಿತಿಯ ಸದಸ್ಯರು ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ನೀರಿನ ಗುಣಮಟ್ಟದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಜಿಲ್ಲಾ ಪ್ರಯೋಗಾಲಯದ ಸಿಬ್ಬಂದಿಗಳು ಹಾಗೂ ಅನುಷ್ಠಾನ ನೆರವು ಸಂಸ್ಥೆಗಳ ಮೂಲಕ ಹಮ್ಮಿಕೊಳ್ಳಲಾಗುತ್ತಿದೆ. |

ಸಂ:ಗ್ರಾಕುನೀ&ನೈಇ/58/ಆಡಳಿತ-8/2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 503 ರ ಲಗತ್ತು.

| | | | ಅನುಬಂಧ-1 |
|---|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | ಮೃತಪಟ್ಟವರ ಸಂಖ್ಯೆ | ಅಸ್ವಸ್ಥಗೊಂಡಿರುವವರ ಸಂಖ್ಯೆ |
| 1 | ಬೀದರ್ | 0 | 61 |
| 2 | ಕೋಲಾರ | 0 | 30 |
| 3 | ಕೊಪ್ಪಳ | 3 | 53 |
| 4 | ರಾಯಚೂರು | 1 | 121 |
| 5 | ಯಾದಗಿರಿ | 3 | 125 |
| 6 | ವಿಜಯನಗರ | 0 | 27 |
| | ಒಟ್ಟು | **7** | **417** |

CE
RDW & SD

| | | ಅನುಬಂಧ-2 |
|---|---|---|
| | | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 503 ರ ಲಗತ್ತು. |
| 1 | ಬೀದರ್ | ಬೀದರ್ ಜಿಲ್ಲೆಯ ಬೀದರ ತಾಲ್ಲೂಕಿನ ಚಟನಳ್ಳಿ ಗ್ರಾಮ ಪಂಚಾಯತಿಯವರು ಚರಂಡಿ ಕಾಮಗಾರಿಯನ್ನು ಕೈಗೊಳ್ಳುವಾಗ ಗ್ರಾಕುನೀ&ನೈ ಇಲಾಖೆಯ ಸ್ಥಳಿಯ ಅಭಿಯಂತರರ ಗಮನಕ್ಕೆ ತರದೆ ಜೆ.ಜೆ.ಎಮ್. ಕಾಮಗಾರಿಯನ್ನು ಹಾದು ಹೋಗುವ ದಾರಿಯಲ್ಲಿ ಲೈನ್‌ಗೆ ಹಾನಿಯುಂಟು ಮಾಡಲಾಗಿದೆ. ಈ ಕಾರಣದಿಂದ ಚರಂಡಿಯ ಕಲುಷಿತ ನೀರು ಪೈಪ್‌ಲೈನ್ ನೀರಿಗೆ ಸೇರಿ ಸದರಿ ಕಲುಷಿತ ನೀರು ಸಾರ್ವಜನಿಕರು ಸೇವಿಸಿ ಅಸ್ವಸ್ಥಗೊಂಡು ಅಸ್ಪತ್ರೆಗೆ ದಾಖಲಾಗಿರುತ್ತಾರೆ. ಬೀದರ್ ಜಿಲ್ಲೆಯ ಚಿಟ್ಟಗುಪ್ಪಾ ತಾಲ್ಲೂಕಿನ ಬೆಳಕೇರಾ ಗ್ರಾಮ ಪಂಚಾಯತಿಯಲ್ಲಿ ಬೋರವೆಲ್ ಕೆಸಿಂಗ್ ಪೈಪ್ ಹಾಳಾಗಿರುವುದರಿಂದ ಮಳೆ ನೀರು ಬಿದ್ದು ಕೇಸಿಂಗ್ ಮೂಲಕ ಪೈಪ್ಲೈನ್ ಸೇರಿ ಸದರಿ ನೀರು ಕಲುಷಿತಗೊಂಡಿರುತ್ತದೆ. |
| 2 | ವಿಜಯನಗರ | ನಾಲಾದ ಮೂಲಕ ಹಾದು ಹೋದ ಹಳೆದ ಪಿ.ವಿ.ಸಿ. ಪೈಪ್ ತಾತ್ಕಾಲಿಕವಾಗಿ ಹಾಳಾಗಿದ್ದರಿಂದ ನೀರು ಕಲುಷಿತಗೊಂಡಿರುತ್ತದೆ. |
| 3 | ಕೋಲಾರ | ಪೈಪಲೈನ್ ಒಡೆದು ಹಾಳಾಗುವುದರಿಂದ ನೀರು ಕಲುಷಿತಗೊಂಡಿರುತ್ತದೆ. |
| 4 | ಕೊಪ್ಪಳ | ಪೈಪಲೈನ್ ಕಾಮಗಾರಿಯನ್ನು ಮಾಡುವಾಗ ಪೈಪ್ ಒಡೆದು ನೀರು ಕಲುಷಿತ ಗೊಂಡಿರುತ್ತದೆ |
| 5 | ರಾಯಚೂರು | ನೆಲಮಟ್ಟದ ಟ್ಯಾಂಕಿಗೆ ಬೋರವೆಲ್ನಿಂದ ಸರಬರಾಜಾಗುವ ನೀರಿನ ಪೈಪಲೈನ್ ಸೋರಿಕೆಯಾಗಿ ಕಲುಷಿತ ನೀರು ಸೇರ್ಪಡೆಯಾದ ಕಾರಣ ನೀರು ಕಲುಷಿತಗೊಂಡು ಗ್ರಾಮದಲ್ಲಿ ಕಲುಷಿತ ನೀರು ಸೇವನೆಯಿಂದ ವಾಂತಿ ಬೇಧಿ ಪ್ರಕರಣಗಳು ವರದಿಯಾಗಿರುತ್ತದೆ. |
| 6 | ಯಾದಗಿರಿ | ಗ್ರಾಮಗಳಲ್ಲಿ ಸ್ವಚ್ಛತೆಯ ಸುರಕ್ಷಾ ಕ್ರಮಗಳು ಇಲ್ಲದಿರುವುದು ಮತ್ತು ನೀರು ಹರಿಯುವ ಚರಂಡಿಗಳಲ್ಲಿ ಕುಡಿಯುವ ನೀರಿನ ಪೈಪ್ ಗಳು ಸೋರಿಕೆಯಾಗುತ್ತಿದ್ದು ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮುಂಜಾಗೃತ ಕ್ರಮ ವಹಿಸದೇ ಇರುವುದರಿಂದ ನೀರು ಕಲುಷಿತಗೊಂಡಿರುತ್ತದೆ. |

CE
RDW & SD